ಗಂಟೆಗಟ್ಟಲೆ ಪ್ರವಚನದಿಂದ ಗ್ರಾಹಕರನ್ನು ಅಯೋಮಯ ಸ್ಥಿತಿಗೆ ತಳ್ಳಿ ತಾವು ಬಹಳ ಶ್ರೇಷ್ಠರೆಂದು ಬೀಗುತ್ತಾರೆ. ಗ್ರಾಹಕರಿಗೆ ಎಷ್ಟು ಅರ್ಥವಾಗದಿದ್ದರೆ ಪಂಡಿತ ಅಷ್ಟು ನಿಪುಣ! ಅವರ ಈ ವೃತ್ತಿ ಸುಲಭ ಮತ್ತು ಲಾಭದಾಯಕ. ಆದರೆ ನಾಳೆ ಯಾವ ಷೇರು ಪುಟಿದೇಳುವುದು, ಯಾವುದು ಇಳಿತ ಕಾಣುವುದು ಎಂಬ ಪ್ರಶ್ನೆಗೆ ಮಾತ್ರ ಯಾರೂ ಉತ್ತರ ಕೊಡುವುದು ಸಾಧ್ಯವಿಲ್ಲ. ಹುಚ್ಚು ಕುದುರೆಯಂತಹ ಮಾರುಕಟ್ಟೆ ಎತ್ತ ವಾಲುತ್ತದೆಯೋ ಬಲ್ಲವರಾರು!

ಉಳಿತಾಯ ಮನೋಧರ್ಮದ ವರುಣ್ ಮಾರುಕಟ್ಟೆಯ ಸರ್ವೀಸ್ ಪ್ರೊವೈಡರ್ಸ್‌ಗಳ ಕಡೆಯಿಂದ ಡಿಮ್ಯಾಟ್ ಅಕೌಂಟ್ ತೆರೆಯಲು ಹುಡುಕಾಟದಲ್ಲಿ ನಿರತನಾದ. 'ನಿನ್ನೊಲುಮೆ ನಮಗಿರಲಿ ತಂದೆ ಕೈ ಹಿಡಿದು ನೀ ನಡೆಸು ಮುಂದೆ...' ಎಂದು ಹಾಡುತ್ತ ಮುಂಬೈ ಮೂಲದ ಪುಂಗಿದಾಸರಿಗೆ ಲಕ್ಷಗಟ್ಟಲೆ ಹಣ ಸುರಿದು ತರಬೇತಿ ಪಡೆದು ಹೂಡಿಕೆ ಮತ್ತು ಉಳಿತಾಯದ ಅರ್ಥ ತಿಳಿದುಕೊಂಡ.

ಷೇರಿನ ಹೊರತಾಗಿ ಬೇರೆ ಪ್ರಪಂಚವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ವರುಣ್ ತಲ್ಲೀನನಾಗಿಬಿಟ್ಟಿದ್ದಾನೆ. ಕಚೇರಿಯಲ್ಲಿ, ಮನೆಯಲ್ಲಿ, ಡ್ರೈವಿಂಗ್ ಮಾಡುವಾಗ, ಹೆಂಡತಿಯ ಜತೆ ಶಾಪಿಂಗ್ ಮಾಡುವಾಗ, ಹೀಗೆ ಎಲ್ಲೆಲ್ಲೂ ತಲೆತುಂಬ ಷೇರು. ಕಚೇರಿಯಿಂದ ಸಂಜೆ ಮನೆಗೆ ಬಂದ ಕೂಡಲೇ ಕಮಾಡಿಟೀಸ್‌ಗಳಾದ ಎಣ್ಣೆ, ಗ್ಯಾಸು ಇವುಗಳ ಜತೆ ವಹಿವಾಟು ಶುರು ಮಾಡಿಬಿಡುತ್ತಾನೆ. ಅವನ ಈ ಮೋಹ ದೈಹಿಕ ಆರೋಗ್ಯದತ್ತ ಗಮನ ಕೊಡದಿರುವಷ್ಟು ಮಟ್ಟಕ್ಕೆ ಬೆಳೆದುಬಿಟ್ಟಿದೆ.

ಇತ್ತೀಚೆಗೆ ಕಂಪನಿಯ ವಾರ್ಷಿಕ ದೈಹಿಕ ಪರೀಕ್ಷೆಯ ಸಲುವಾಗಿ ಲಿಪಿಡ್ ಟೆಸ್ಟ್ ಮತ್ತು ಎಕ್ಸ್ ರೇ ಮುಗಿಸಿ, ಟಿಎಂಟಿ ಪರೀಕ್ಷೆಗೆ ಹೋದನು. ಅಲ್ಲಿ ಷರ್ಟ್ ಕಳಚಿದನು. ಅಲ್ಲಿ ಟೆಕ್ನೀಷಿಯನ್ ಇಸಿಜಿ ಮತ್ತು ಬಿ.ಪಿ. ಪರೀಕ್ಷಿಸಿ ಹತ್ತು ಎಲೆಕ್ಟ್ರೋಡ್ ಎದೆಗೆ ಅಂಟಿಸಿದ ಮೇಲೆ ವರುಣ್ ಟಿಎಂಟಿ ಯಂತ್ರ ಏರಿದನು. ಎದುರಿನ ದೊಡ್ಡ ಪರದೆಯಲ್ಲಿ ಇಸಿಜಿ ಮತ್ತು ಬಿ.ಪಿ. ಕಾಣಬಹುದು. ಟೆಕ್ನೀಷಿಯನ್ ನಿಯಂತ್ರಣದಲ್ಲಿರುವ ಮಿಷನ್ ಮಂದಗತಿಯಲ್ಲಿ ಆರಂಭವಾದ ವರುಣ್ ನಡಿಗೆಯ ನಂತರ ಸ್ವಲ್ಪಸ್ವಲ್ಪವೇ ವೇಗ ಹೆಚ್ಚಾಗಿ ಸ್ವಲ್ಪ ಎತ್ತರ ಹೆಚ್ಚಾಯಿತು. ಅದಕ್ಕೂ ಸಿದ್ಧನಾದ ವರುಣ್ ತನ್ನ ವೇಗ ಹೆಚ್ಚಿಸಿದ. ಆಗ ಅವನ ಬಿ.ಪಿ. ಮತ್ತು ಹೃದಯಬಡಿತ ಜೋರಾಗಿ ಪರದೆಯ ಏರುಗತಿ ಕಂಡು ವರುಣ್ ಮುಖ ಅರಳಿತು. ಅವನಿಗೆ ಅಲ್ಲಿ ಷೇರು ಮಾರುಕಟ್ಟೆಯ ಕ್ಯಾಂಡಲ್ಸ್ ಕಾಣುತ್ತಿತ್ತು! ಇತ್ತ ಬಿ.ಪಿ.ಯ ಗೂಳಿ ಓಟ ಅಪಾಯ ಮಟ್ಟ ತಲುಪಿದ್ದರಿಂದ ಟೆಕ್ನೀಷಿಯನ್ ಬೆಚ್ಚಿಬಿದ್ದು, ಮಿಷನ್ ಸ್ವಿಚ್ ಆಫ್ ಮಾಡಿದ. ಅದಕ್ಕೆ ಬೇಸರಗೊಂಡ ವರುಣ್, 'ಸೂಚ್ಯಂಕ ಗೂಳಿ ಓಟದಲ್ಲಿ ಇದ್ದರೂ ಬಿಡುವುದಿಲ್ಲ ಈ ನಿಯಂತ್ರಕರು' ಎಂದು ಗೊಣಗಿದ.

ನಾವು ಸಾಧಾರಣವಾಗಿ ಎಲ್ಲ ವಿಷಯಗಳಿಗೂ ಪಾಶ್ಚಾತ್ಯರನ್ನು ಅನುಕರಿಸುತ್ತೀವಲ್ಲವೆ? ಈ ಷೇರು ಮಾರುಕಟ್ಟೆ ಕೂಡ ದಿನಂಪ್ರತಿ ಜಾಗತಿಕ ಮಾರುಕಟ್ಟೆಯ ನಿಯಂತ್ರಕರ ಮೇಲೆ ಅವಲಂಬಿತವಾಗಿದೆ.

ಹಾಸಿಗೆ ಇದ್ದಷ್ಟೇ ಕಾಲು ಚಾಚುವವರು ಮಧ್ಯಮ ವರ್ಗದವರು. ಇರುವ ಹಣದಲ್ಲಿ ಹೂಡಿಕೆ ಅಥವಾ ವ್ಯವಹಾರ ಮಾಡಿದರೆ ಉತ್ತಮ, ಸಾಲ ಮಾಡಿಕೊಂಡರೆ ಕಷ್ಟ.

ವರುಣ್ ಕಥೆ ಹಾಗಾದರೆ, ಪ್ರಸಾದನ ವಿಚಾರವೇ ಬೇರೆಯಾಗಿತ್ತು. ಬ್ಯಾಂಕ್ ಉದ್ಯೋಗದಲ್ಲಿ ಊರೂರು ಸುತ್ತಿ ಕೊನೆಗೆ ರಾಜೀನಾಮೆ ನೀಡಿ ಷೇರಿನ ವೃತ್ತಿ ಆರಂಭಿಸಿದನು. ಷೇರುಗಳ ಸಾಧನೆಯ ಪ್ರದರ್ಶನವನ್ನು ಅಭ್ಯಸಿಸಿ ಚೇತರಿಕೆಗೊಂಡು ಪುಟಿದೇಳುವ ಕಂಪನಿಯ ಆಂತರಿಕ ವಿಷಯಗಳು ಮತ್ತು ಕುಸಿಯುತ್ತಿರುವ ಕಂಪನಿಗಳ ಕಾರಣ ತಿಳಿದು ಹೂಡಿಕೆ ಮಾಡತೊಡಗಿದನು.

'ಸಹನೆ ವಜ್ರದ ಕವಚ – ತಾಳಿದವನು ಬಾಳಿಯಾನು' ಎಂಬಂತೆ ಪ್ರಸಾದ್ ಹೊಸ ವೃತ್ತಿಯಲ್ಲಿ ಯಶಸ್ಸು ಕಾಣತೊಡಗಿದ್ದಾನೆ. ಪ್ರಾಫಿಟ್ ಬುಕ್ ಮಾಡಿಕೊಂಡು ಹೊರಬರುತ್ತಾನೆ. ಹಣ ಡಿಮ್ಯಾಟ್ ಖಾತೆಗೆ ಜಮಾ ಆಗುತ್ತದೆ. ಈ ಕ್ಷೇತ್ರದಲ್ಲಿ ಆರ್ಥಿಕ ಸ್ಥಿರತೆಗಾಗಿ ಅಲ್ಪ ಸ್ವಲ್ಪ ರಿಸ್ಕ್ ತೆಗೆದುಕೊಳ್ಳುವ ಮನೋಭಾವ ಇರಬೇಕು. ಆದರೆ ಯಶಸ್ವಿ ಷೇರು ವೃತ್ತಿಗೆ ಜಾಣತನ, ಬುದ್ಧಿಶಕ್ತಿ–ಚತುರತೆ, ಹಠಾತ್ ನಿರ್ಣಯ ಕೈಗೊಳ್ಳುವ ಮನೋಭಾವ ಬಹಳ ಮುಖ್ಯ.

ಇಂಟ್ರಾ ಡೇ ಟ್ರೇಡಿಂಗ್, ಡೆಲಿವರಿ ಟ್ರೇಡಿಂಗ್, ಆಪ್ಷನ್ ಮಾರುಕಟ್ಟೆ ಒಪ್ಪಂದ, ನಿಗದಿಪಡಿಸಿದ ಸಮಯದಲ್ಲಿ ಷೇರನ್ನು ಕೊಳ್ಳುವ ಅಥವಾ ಮಾರುವ ಸ್ಟ್ರೈಕ್ ರೇಟ್, ಕಾಲ್ ಆಪ್ಷನ್, ಪುಟ್ ಆಪ್ಷನ್, ಫ್ಯೂಚರ್ ಮಾರುಕಟ್ಟೆ ಈ ರೀತಿಯ ಹಲವು ವಿಧಗಳು ಇವೆ.



ಷೇರು ಆಟ ಅರಿಯದವರಿಗೆ ಅದು ತುಂಬ ಭಯದ ಆಟವಾಗಿ, ಬೋರಿಂಗ್ ಆಟವಾಗಿ ಕಾಣುತ್ತದೆ; ನನ್ನ ಸ್ನೇಹಿತರೊಬ್ಬರು ಹೇಳುತ್ತಿದ್ದ ಮಾತು ನೆನಪಾಗುತ್ತದೆ: ಷೇರು ಟ್ರೇಡಿಂಗ್ ಹಿಂಸೆ ಥ್ರಿಲ್ಲರ್–ಸಸ್ಪೆನ್ಸ್ ಸಿನಿಮಾದಂತೆ, ಇದ್ದಕ್ಕಿದ್ದ ಹಾಗೆ ಕ್ಲೈಮಾಕ್ಸ್ ತಲುಪಿಬಿಟ್ಟಿರುತ್ತದೆ!

ನಿಮಗೆ ಈ ಅನುಭವ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಸೂಚ್ಯಂಕ ಯಾವ ರೀತಿಯಲ್ಲಾದರೂ ಚಲಿಸಬಹುದು, ಇದು ಸಾವು–ಬದುಕಿನ ಪ್ರಶ್ನೆಯಾಗುತ್ತದೆ. ಷೇರುವೃತ್ತಿಯು ಒಂದು ಯುದ್ಧ ಇದ್ದ ಹಾಗೆ.

ವಹಿವಾಟು ಜೂಜಾಟವಲ್ಲ, ಅದು ವೈಜ್ಞಾನಿಕ. ಕಂಪನಿಗಳ ಸಂಪತ್ತು ವೃದ್ಧಿಸಲು ಬಹಳಷ್ಟು ಜನರು ಷೇರಿನಲ್ಲಿ ಹೂಡಿಕೆ ಮಾಡುತ್ತಾರೆ. ಅದು ಕ್ಯಾಸಿನೊದಲ್ಲಿ ಜೂಜಾಡಿದಂತಲ್ಲ. ಆದರೆ ಎಲ್ಲ ಜೂಜಿನಲ್ಲಿ ಪರ್ಮುಟೇಷನ್ ಪ್ರಾಬಬಿಲಿಟಿ ಇದ್ದಹಾಗೆ.

ಷೇರು ಜೂಜಾಟವಲ್ಲ, ಟ್ರಯಲ್ ಮತ್ತು ಎರರ್ ಅಲ್ಲ. ಅದು, ಕಲೆ, ವಿಜ್ಞಾನ, ತಂತ್ರಜ್ಞಾನ, ರಾಜಕೀಯ, ದಂಧೆಯೋ, ವರವೋ, ಶಾಪವೋ ತಿಳಿಯದು. ಬೇಂದ್ರೆಯವರ ಕವಿತೆ ನೆನಪಾಗುತ್ತದೆ:

ಕುರುಡು ಕಾಂಚಾಣ ಕುಣಿಯುತಲಿತ್ತು  
ಕಾಲಿಗೆ ಬಿದ್ದವರ ತುಳಿಯುತಲಿತ್ತೋ  
ಕುರುಡು ಕಾಂಚಾಣ

ಕುರುಡು ಕಾಂಚಾಣದ ಅಬ್ಬರದ ಕುಣಿತದ ಸಾಲುಗಳು ಕಿವಿಯಲ್ಲಿ ಗುಂಯ್‌ಗುಡುತ್ತಿವೆ.

ಪ್ರತಿಕ್ರಿಯಿಸಿ: feedback@sudha.co.in